ಆಕ್ರೋಶದಿಂದ ಹೇಳಿದ್ದರು. ಜಾತಿಯ ಸೂಕ್ಷ್ಮಗಳು ಹೇಗೆಲ್ಲಾ ಇರುತ್ತವೆ ಎಂದು ಅರ್ಥಗರ್ಭಿತವಾಗಿ ಮನವರಿಕೆ ಮಾಡಿಸಿದ್ದರು. ಈ ರುದ್ರಮೂರ್ತಿ 'ಅವು ಅಂಗೇ' ಅನ್ನೋ ಮಾತು ದ್ರೋಣ ಹೇಳಿದ ಮಾತಿಗಿಂತ ಬೇರೇನೂ ಅಲ್ಲ ಎನಿಸತೊಡಗಿತು. ಈ ಜಾತಿಹುಳಗಳು ಯಾವಾಗಲಾದರೂ ವಿಷವನ್ನು ಕಕ್ಕಲು ಕಾಯುತ್ತಿರುತ್ತವೆ. ಸಂದರ್ಭ ಸಿಕ್ಕಾಗ ಕಕ್ಕಿಬಿಡುತ್ತವೆ ಎನಿಸತೊಡಗಿತು. ಉತ್ತುಮ್ರು ಅಂತ ತಮ್ಗೆ ತಾವೇ ಕರ್ಕೊಳ್ಳೋ ಇವುಗಳ್ಗೆ ಇಂಥ ಪದಗಳನ್ನು ಬಳಸುವುದು ಸುಲಭ ಮತ್ತು ರಕ್ತಗತ. ಕೇಳಿಸಿಕೊಳ್ಳುವವರ ಬದುಕನ್ನು ಆಡಿಕೊಳ್ಳುವ ಇಂಥವರನ್ನು ಏನು ಮಾಡಬೇಕೆಂದು ಒಳಗೊಳಗೆ ಕುದಿಯತೊಡಗಿದ.

ಹೌದು, 'ಅವು ಅಂಗೇ' – ಅದನ್ನು ಕೇಳಲು ಇವನ್ಯಾರು? ಎಂದು ಒಂದುಕ್ಷಣ ಅನಿಸಿಬಿಟ್ಟಿತು. ಅವ್ನು ಎಷ್ಟು ಸುಲಭವಾಗಿ ಹೇಳಿಬಿಟ್ಟ. 'ಅವು' ಅಂದರೆ ಅವನು ಹೇಳಿರುವ ಆ ಪದದಲ್ಲಿ ಈರಮ್ಮಜ್ಜಿಯೂ, ಕಾಂತನೂ ಅಲಿಯಾಸ್ ಕದ್ರನೂ, ನಾಗ್ರ ಅಲಿಯಾಸ್ ಫಣಿರಾಜನೂ ಸೇರಿಹೋದರು. ಇಡೀ ಜಾತಿಯನ್ನೇ ನಿವ್ವಾಳಿಸಿ ಆ ಪದದಲ್ಲಿ ಮುಳುಗಿಸಿಬಿಟ್ಟಿದ್ದ ಆ ರುದ್ರಮೂರ್ತಿ. ಅದರ ಅರಿವಿಲ್ಲದ ಸೋಗಲಾಡಿ ಫಣಿರಾಜನಿಗೆ ರುದ್ರಮೂರ್ತಿ ಕಾಂತನಿಗೆ ಬೈಯ್ದದ್ದು ಕೇಳಿ ಆನಂದದಲ್ಲಿ ತೇಲಾಡಿದ. ಖುಷಿಗೆ ಆ ರಾತ್ರಿಯೇ ಬಾರಿನ ಎಣ್ಣೆಯಲ್ಲಿ ರುದ್ರಮೂರ್ತಿಯನ್ನು ಈಜಾಡಿಸಿಬಿಟ್ಟಿದ್ದ.

ಈ ಪದ ಕೇಳಿದಾಗಿನಿಂದ ಕಾಂತ ಕದ್ರನಾಗತೊಡಗಿದ. ತನ್ನಳ್ಳಿಯಲ್ಲಿ ತನ್ನಜ್ಜ ಊರಿನ ಸತ್ತನಾಯಿಯನ್ನು ಎಳೆದುಹಾಕುತ್ತಿರುವುದು, ತಾನು ಸತ್ತ ನಾಯಿಮರಿಯನ್ನು ಹೊತ್ತೊಯ್ಯುತ್ತಿರುವುದು ಕಾಣಿಸಿತು. ನಿಸ್ತೇಜವಾಗಿ ಬಿದ್ದಿದ್ದ ನಾಯಿ ಮತ್ತು ನಾಯಿಮರಿ ಉಸಿರನ್ನು ಕಳೆದುಕೊಂಡು ಅನಾಥವಾಗಿ ಬಿದ್ದಿದ್ದವು. ಅಜ್ಜ ನಾಯಿಯ ಹಿಂದಿನ ಎರಡು ಕಾಲುಗಳನ್ನು ಹಿಡಿದು, ಕದ್ರನಿಗೂ ಮರಿಯ ಹಿಂದಿನ ಎರಡು ಕಾಲನ್ನು ಹಿಡಿದುಕೊಳ್ಳುವಂತೆ ಹೇಳಿದ. ಕದ್ರನಿಗೆ ಆ ಕಾಲುಗಳು ಕಾಣಲಿಲ್ಲ. ತಡಕಿನೋಡಿದ ನಾಯಿಮರಿಗೆ ಆ ಎರಡು ಕಾಲುಗಳು ಬೆಳೆದೇ ಇರಲಿಲ್ಲ. ಆದರೂ ಕದ್ರ ಮರಿನಾಯಿಯನ್ನು ಎತ್ತಿ ಹೆಗಲಮೇಲಿರಿಸಿಕೊಂಡು ಅಜ್ಜನ ಹಿಂದೆ ನಡೆಯುತ್ತಿದ್ದ. ಅಜ್ಜ ನಾಯಿಯನ್ನು ಊರಾಚೆಯವರೆಗೂ ಎಳೆದು ಹುಣಸೆತೋಪಿನಲ್ಲಿ ಗುಂಡಿ ತೋಡಿ ಮರಿ ಮತ್ತು ನಾಯಿಯನ್ನು ಒಂದೇ ಗುಂಡಿಯಲ್ಲಿ ಮುಚ್ಚಿ ಊರಿನ ಹೆಬ್ಬಾಗಿಲಿಗೆ ಅಜ್ಜನೊಂದಿಗೆ ಕದ್ರನೂ ಬಂದ. ಹಾಗೇ ಬಂದ ಅಜ್ಜ ಉತ್ತುಮ್ರ ಜಾತಿಗಳ ಮನೆಯ ಮುಂದಕ್ಕೆ ಹೋಗಿ ತಲೆಬಾಗಿ ನಿಲ್ಲುತ್ತಿದ್ದ. ಜೊತೆಯಲ್ಲಿದ್ದ ಕದ್ರ ಅಜ್ಜನನ್ನು 'ಬೇಡಜ್ಜ' ಎಂದು ಬೇಡಿಕೊಳ್ಳುತ್ತಿದ್ದ. ಉತ್ತುಮ್ರು ಒಳಗಿನಿಂದ ಬೇಸಿದ್ದ ಅರಳೆಣ್ಣೆಯನ್ನು ತಂದು ದೂರದಿಂದಲೇ ಆ ತಾತನ ತಲೆಗೆ ಎರಚುತ್ತಿದ್ದರು. ಊರಿನ ಎಲ್ಲ ಮನೆಯವರ ಅರಳೆಣ್ಣೆ ತಾತನ ತಲೆಯನ್ನು ನೆನೆಸಿ ಹರಿದು ಹರಿದು ಶರೀರವನೆಲ್ಲಾ ಆವರಿಸಿ ಎಣ್ಣೆಯ ಗಾಣದಲ್ಲಿ ಸಿಕ್ಕಿಹಾಕಿಕೊಂಡಂತೆ ಕಾಲೆತ್ತಿಡಲಾಗದೆ ಸಂಕಟಪಡುತ್ತಿದ್ದ. ಅಜ್ಜನ ಜೊತೆ ನಡೆಯುತ್ತಿದ್ದ ಕದ್ರನಿಗೂ ಆ ಅರಳೆಣ್ಣೆ ಮೆತ್ತಿಕೊಂಡಿತು. ಅಜ್ಜ ನಡೆಯಲಾಗದ ಕದ್ರನನ್ನು ಹೆಗಲಮೇಲೆ ಹೊತ್ತುಕೊಂಡ. ಮೊದಲೇ ಸೋತಿದ್ದ ಅಜ್ಜ ಕದ್ರನನ್ನು ಹೊತ್ತಿದ್ದರಿಂದ ಮತ್ತಷ್ಟು ಕುಸಿದ. ಕದ್ರ ಅಜ್ಜನ ಹೆಗಲಿನಿಂದ ಜಾರಿ ಅಜ್ಜನ ಕಂಕುಳದಲ್ಲಿ ಕೋತಿಯಂತೆ ಅವುಚಿಕೊಂಡ. ಅಜ್ಜನ ತಲೆಯ ಮೇಲಿನ ಅರಳೆಣ್ಣೆ ಸೋರಿ ಸೋರಿ ಕದ್ರನ ದೇಹವನ್ನೂ ಆವರಿಸತೊಡಗಿತು. ಕದ್ರ ಆ ಅರಳೆಣ್ಣೆಯಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದ ಅಜ್ಜನಿಂದ ಕೆಳಗೆ ಇಳಿಯಲು ನೋಡಿದ. ಆಗಲೇ ಇಲ್ಲ. ಅರಳೆಣ್ಣೆ ಹಿಡಿದುಬಿಟ್ಟಿತ್ತು. ಅದು ಅರಳೆಣ್ಣೆಯೋ? ಅಂಟುರಸವೋ... ಇಬ್ಬರನ್ನೂ ಬಿಡದೇ ಅಂಟಿಸಿತ್ತು.

ದೂರದಲ್ಲಿ ಈರಮ್ಮಜ್ಜಿ ಮೂರು ದಾರಿ ಕೂಡುವ ಜಾಗದಲ್ಲಿ ಕೂತು ಮಡಿಲಲ್ಲಿದ್ದ ಬೆಂಕಿಕೆಂಡವ ನುಂಗುತ್ತ ಒಂದೇ ಸಮನೇ 'ಯವ್ವದೋ.. ಯಪ್ಪದೋ..'. ಎಂದು ಕೂಗುತ್ತಿದ್ದಳು. ಅಲ್ಲೇ ನಿಂತ ರುದ್ರಮೂರ್ತಿ, ಗೌಡ, ನಂಜುಂಡಯ್ಯ, ನಾಗ್ರ ಅಲಿಯಾಸ್ ಫಣಿರಾಜರು ಗಹಗಹಿಸಿ ನಗತೊಡಗಿದರು... ನುಂಗಿದ ಕೆಂಡದುಂಡೆ ಇಂಚಿಂಚೇ ಈರಮ್ಮಜ್ಜಿಯನ್ನು ಆವರಿಸತೊಡಗಿತು. ಬಿಳಿಗೂದಲು ಬಿಟ್ಟುಕೊಂಡು ಕರಿಕಿಯಾಗಿದ್ದ ಈರಜ್ಜಿ ಕೆಂಪಾನೇ ಕೆಂಪು ಕೆಂಡವಾಗತೊಡಗಿದಳು.. ಆ ಕೆಂಡದ ಕಾವು ರುದ್ರಮೂರ್ತಿ, ಗೌಡ, ಫಣಿರಾಜರಿದ್ದ ಕಡೆ ನಾಲಗೆ ಹಾಸುತ್ತಿತ್ತು... ಈಕಡೆ ಕಾಂತ ಅಜ್ಜನ ಚಕ್ಕಳದ ಸುಕ್ಕಿನೊಳಗೆ ಕದ್ರನಾಗಿ ಕರಗಿಹೋಗುತ್ತಿದ್ದ... ●